"ಮುಖಗವಸು ಧರಿಸಿ, ಸ್ಯಾನಿಟೈಸರ್ ಬಳಸಿ"

"ಕಡ್ಡಾಯವಾಗಿ ಸಾಮಾಜಿಕ ಅಂತರ ಕಾಪಾಡಿ"

ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ನಂ.ಚುನಾವಣೆ.ಸಿಆರ್:18/2021-22

ದಿನಾಂಕ:06.11.2021

## ಪತ್ರಿಕಾ ಪ್ರಕಟಣೆ

ಚಿತ್ರದುರ್ಗ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳ ಭಾವಚಿತ್ರವಿರುವ ಮತದಾರರ ಪಟ್ಟಿಗಳ ವಿಶೇಷ ಪರಿಷ್ಕರಣೆ-2022ರ ಸಂಬಂಧ ಭಾರತ ಚುನಾವಣಾ ಆಯೋಗವು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ಪ್ರಕಟಿಸಿರುತ್ತದೆ.

-:ವೇಳಾಪಟ್ಟಿ:-

| | | |
|---|---|---|
| 1 | ಕರಡು ಮತದಾರರ ಪಟ್ಟಿ ಪ್ರಕಟಣೆ | 08.11.2021 (ಸೋಮವಾರ) |
| 2 | ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ನಿಗದಿತ ದಿನಾಂಕ | 08.11.2021 (ಸೋಮವಾರ) ರಿಂದ 08.12.2021 (ಬುಧವಾರ) ವರೆಗೆ |
| 3 | ಮಿಂಚಿನ ನೋಂದಣಿ ಕಾರ್ಯಾಚರಣೆಯ ದಿನಾಂಕಗಳು | 14.11.2021(ಭಾನುವಾರ)<br>21.11.2021(ಭಾನುವಾರ)<br>28.11.2021(ಭಾನುವಾರ) |
| 4 | ಹಕ್ಕು ಮತ್ತು ಆಕ್ಷೇಪಣೆಗಳನ್ನು ತೀರ್ಮಾನಿಸುವ ದಿನಾಂಕ | 27.12.2021 (ಸೋಮವಾರ) ವರೆಗೆ |
| 5 | ಮತದಾರರ ಪಟ್ಟಿಗಳ ಅಂತಿಮ ಪ್ರಕಟಣೆ | 13.01.2022 (ಗುರುವಾರ) |

ಪ್ರಯುಕ್ತ ದಿ:01.01.2022 ಕ್ಕೆ 18 ವರ್ಷ ಪೂರ್ಣಗೊಳ್ಳುವವರು ಹಾಗೂ ಸಂಬಂಧಿಸಿದ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಲ್ಲದವರು ಹಾಗೂ ಹೆಸರು ಕೈಬಿಟ್ಟುಹೋಗಿರುವವರು ಹಾಗೂ ಮತದಾರರ ಪಟ್ಟಿಯಲ್ಲಿ ಮಾಹಿತಿಯನ್ನು ತಿದ್ದುಪಡಿ ಮಾಡಿಸಬೇಕಾದಲ್ಲಿ ಮತ್ತು ಬೇರೆ ಮತಗಟ್ಟೆ/ಕ್ಷೇತ್ರಕ್ಕೆ ವರ್ಗಾಹಿಸಬೇಕಾಗಿದ್ದಲ್ಲಿ ನಿಗದಿಪಡಿಸಿರುವ ನಮೂನೆಗಳಾದ 6,7,8 ಮತ್ತು 8ಎ ಗಳಲ್ಲಿ ಅರ್ಜಿಯನ್ನು ಭರ್ತಿ ಮಾಡಿ ದಾಖಲಾತಿಗಳೊಂದಿಗೆ ತಮ್ಮ ವ್ಯಾಪ್ತಿಯ ಮತದಾನ ಕೇಂದ್ರದಲ್ಲಿ /ತಾಲ್ಲೂಕು ಕಛೇರಿಯಲ್ಲಿ/ ಉಪವಿಭಾಗಾಧಿಕಾರಿಗಳವರ ಕಾರ್ಯಾಲಯದಲ್ಲಿ ನೀಡಿ ಸ್ವೀಕೃತಿ ಪಡೆಯಬಹುದಾಗಿದೆ.

ಅಲ್ಲದೇ ಭಾರತ ಚುನಾವಣಾ ಆಯೋಗವು ಹೊಸದಾಗಿ ಮತದಾರರ ಸಹಾಯವಾಣಿ (Voter Help line App) ನ್ನು ಜಾರಿಗೆ ತಂದಿದ್ದು, ಸಾರ್ವಜನಿಕರು ಮತದಾರರ ಸಹಾಯವಾಣಿ (Voter Help line App) ಮುಖಾಂತರವೇ ಆನ್‌ಲೈನ್‌ನಲ್ಲಿ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಿಕೊಳ್ಳುವಂತೆ ಕೋರಿದೆ.

ಜಿಲ್ಲಾಧಿಕಾರಿಗಳು ಹಾಗೂ
ಜಿಲ್ಲಾ ಚುನಾವಣಾಧಿಕಾರಿಗಳು
ಚಿತ್ರದುರ್ಗ ಜಿಲ್ಲೆ

ಪ್ರತಿಯನ್ನು:-

1) ಜಿಲ್ಲಾ ವಾರ್ತಾಧಿಕಾರಿಗಳು, ಚಿತ್ರದುರ್ಗರವರಿಗೆ ಕಳುಹಿಸುತ್ತಾ ಸರ್ಕಾರಕ್ಕೆ ಯಾವುದೇ ವೆಚ್ಚ ಬಾರದಂತೆ ರಾಜ್ಯ ಹಾಗೂ ಸ್ಥಳೀಯ ದಿನಪತ್ರಿಕೆಗಳಲ್ಲಿ ಮತ್ತು ಸ್ಥಳೀಯ ಕೇಬಲ್‌ಗಳಲ್ಲಿ ಸುದ್ದಿ ರೂಪದಲ್ಲಿ **ದಿನಾಂಕ:08.11.2021** ರಂದೇ ಬರುವ ಹಾಗೇ ಪ್ರಚುರಪಡಿಸಲು ಕೋರಿದೆ.
2) ಉಪವಿಭಾಗಾಧಿಕಾರಿಗಳು, ಚಿತ್ರದುರ್ಗ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3) ಜಿಲ್ಲೆಯ ಎಲ್ಲಾ ತಹಶೀಲ್ದಾರರಗಳಿಗೆ ಕಳುಹಿಸುತ್ತಾ ಸರ್ಕಾರಕ್ಕೆ ಯಾವುದೇ ವೆಚ್ಚಬಾರದಂತೆ ಸ್ಥಳೀಯ ದಿನಪತ್ರಿಕೆಗಳಲ್ಲಿ ಹಾಗೂ ಸ್ಥಳೀಯ ಕೇಬಲ್‌ಗಳಲ್ಲಿ ಸುದ್ದಿ ರೂಪದಲ್ಲಿ **ದಿನಾಂಕ:08.11.2021** ರಂದೇ ಬರುವ ಹಾಗೆ ಕ್ರಮವಹಿಸಲು ಸೂಚಿಸಿದೆ.
4) ಜಿಲ್ಲೆಯಎಲ್ಲಾ ಸ್ಥಳೀಯ ಸಂಸ್ಥೆಗಳ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿಗಳ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸದೆ.